# ಬೇಡಿ

## ತತ್ತ್ವ–ಸತ್ವದ ನಿಷ್ಠುರವಾದಿ



'ಕ್ರಿಕೆಟ್ಟನ್ನು ಆಡುವುದಷ್ಟೇ ಅಲ್ಲ, ಅದನ್ನು ಬದುಕಬೇಕು' – ಹೀಗೆನ್ನುತ್ತಿದ್ದವರು ಬಿಷನ್ ಸಿಂಗ್ ಬೇಡಿ. 'ಗೌರವವನ್ನು ತಮ್ಮ ಕಲಾವಂತಿಕೆಯಿಂದಲೇ ಅವರು ಸಂಪಾದಿಸಿದ್ದರು' ಎಂದು ಇತ್ತೀಚೆಗೆ ಬೇಡಿ ತೀರಿಹೋದಾಗ ಅವರ ಕುರಿತು ಇನ್ನೊಬ್ಬ ಸ್ಪಿನ್ನರ್ ಎಸ್. ವೆಂಕಟರಾಘವನ್ ಹೇಳಿದ್ದರು. ಬೇಡಿ ಅವರನ್ನು ಹತ್ತಿರದಿಂದ ಬಲ್ಲ ಎಲ್ಲರೂ ಅವರನ್ನು ತತ್ತ್ವಜ್ಞಾನಿ ಎಂದೇ ಕರೆಯುತ್ತಿದ್ದುದು. ಒಬ್ಬ ಕ್ರಿಕೆಟಿಗ ಹೀಗೆ ಆಟವನ್ನೂ ಮೀರಿ ಬೇರೆಲ್ಲ ಆಯಾಮಗಳಿಂದ ಬೆಳೆಯುವುದು ವಿರಳವೆ. ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಮಹಾತ್ಮ ಗಾಂಧಿ ಹಾಗೂ ಸುಭಾಷ್ ಚಂದ್ರ ಬೋಸ್ ಅವರಲ್ಲಿ ಏನು ವಿಶೇಷತೆ ಇತ್ತು ಎಂಬ ಪ್ರಶ್ನೆಗೆ ಸಿಗುವ ಉತ್ತರವೇ ಬೇಡಿ ಅವರ ವಿಷಯದಲ್ಲೂ ಸಿಗುತ್ತದೆ' ಎಂದು ಶ್ಲಾಘಿಸಿದ್ದಕ್ಕೂ ಕಾರಣ ಇದೆ.

ಇವತ್ತು ವಿಶ್ವ ಕ್ರಿಕೆಟ್‌ನಲ್ಲಿ ಎಡಗೈನಲ್ಲಿ ನಿಧಾನಗತಿಯ ಬೌಲಿಂಗ್ ಮಾಡುವ ಆಟಗಾರರಿಗೆ ವಿಪರೀತ ಬೇಡಿಕೆ ಇದೆ. ಬಲಗೈ ಬ್ಯಾಟ್ಸ್‌ಮನ್‌ಗಳು ತಡಕಾಡುವಂತೆ ಮಾಡಬಲ್ಲ ಸಹಜ ಶೈಲಿಯ ಬೌಲಿಂಗ್ ಇದು. ಬಿಷನ್ ಸಿಂಗ್ ಬೇಡಿ ಅವರ ಬೌಲಿಂಗ್ ಶೈಲಿ ಕೂಡ ಇದೇ ಆಗಿತ್ತು. 1960–70ರ ದಶಕದಲ್ಲಿ 67 ಟೆಸ್ಟ್‌ಗಳಲ್ಲಿ 266 ವಿಕೆಟ್‌ಗಳನ್ನು ತೆಗೆಯುವುದು ತಮಾಷೆಯ ಮಾತಾಗಿರಲಿಲ್ಲ. ಅಂತಹ ಅಂಕಿಅಂಶವನ್ನು ತಮ್ಮ ಹೆಸರಿನೊಟ್ಟಿಗೆ ಬರೆದುಕೊಂಡ ಅವರು, ಆಡಿದ್ದು ಬರೀ ಹತ್ತು ಏಕದಿನದ ಪಂದ್ಯಗಳನ್ನು. ಏಳು ವಿಕೆಟ್‌ಗಳಷ್ಟೇ ಆ ಮಾದರಿಯ ಕ್ರಿಕೆಟ್‌ನಲ್ಲಿ ಸಿಕ್ಕಿದ್ದು.

ಭಾರತವು ಒಂದು ಕಾಲದಲ್ಲಿ ನಾಲ್ವರು ಸ್ಪಿನ್ನರ್‌ಗಳನ್ನು ನೆಚ್ಚಿಕೊಂಡಿತ್ತು. ಎರ್ರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಎಸ್. ವೆಂಕಟರಾಘವನ್ ಜೊತೆಯಲ್ಲಿ ಬೇಡಿ ಇದ್ದ ಕಾಲಘಟ್ಟವದು. ಆ ಮೂವರನ್ನೂ ಬೇಡಿ ಯಾವತ್ತೂ 'ಸ್ಪಿನ್ ಕಲಾವಿದರು' ಎಂದೇ ಕರೆಯುತ್ತಿದ್ದುದು. ಹಾಗಾದರೆ ತಾವು ಏನು ಎಂದು ಯಾರಾದರೂ ಕೀಟಾಯಿಸಿದರೆ, 'ನಾನೊಂದು ಕಾಗ್ ಅಷ್ಟೆ' ಎಂದು ಇಂಗ್ಲಿಷ್‌ನಲ್ಲಿ ತಮಗೆ ತಾವೇ ತಮಾಷೆ ಮಾಡಿಕೊಳ್ಳುತ್ತಿದ್ದರು. 'ಕಾಗ್' ಎಂದರೆ ಚೂಪಾದ ಹಲ್ಲುಗಳುಳ್ಳ ಉರುಳುವ ಗಾಲಿ ಅಥವಾ ಒಂದು ಬಗೆಯ ಹುಲ್ಲು ಎಂಬ ಅರ್ಥಗಳಿವೆ. ಆತ್ಮಪ್ರಶಂಸೆಯನ್ನು ಅವರು ಯಾವತ್ತೂ ಒಪ್ಪುತ್ತಿರಲಿಲ್ಲವೆನ್ನುವುದಕ್ಕೆ ಈ ಘಟನೆಯೇ ಉದಾಹರಣೆ.

> ಕಬೀರರ ದೋಹಾಗಳನ್ನು ಹೇಳುತ್ತಾ, ಅವುಗಳ ಅರ್ಥ–ತತ್ತ್ವದ ಕುರಿತು ಬಣ್ಣಿಸುತ್ತಿದ್ದ ಬಿಷನ್ ಸಿಂಗ್ ಬೇಡಿ ಅವರಿಗೆ ಜಗತ್ತಿನ ಎಲ್ಲ ವಿಷಯಗಳಲ್ಲಿಯೂ ಆಸಕ್ತಿ ಇತ್ತು. ಕೆಲವರಿಗೆ ದ್ರೋಣಾಚಾರ್ಯರಾಗಿದ್ದರು. ಪಾಕಿಸ್ತಾನದಲ್ಲಿಯೂ ಅವರು ಫೇಮಸ್ಸು!

■ ಎನ್ವಿ

ಕ್ರಿಕೆಟ್‌ನ ವಿಷಯದಲ್ಲಿ ಬೇಡಿ ಸಂಪ್ರದಾಯವಾದಿ. ಇದನ್ನು ಕೆಲವರು ವಿರೋಧಿಸಿ, ಅವರೊಟ್ಟಿಗೆ ವಾದಗಳನ್ನೂ ಹೂಡಿದ್ದುಂಟು. ಕಾಪಿ ಬುಕ್ ಹೊಡೆತಗಳಿಂದಲೇ ದಂತಕಥೆಯಾದ ಸರ್ ಡಾನ್ ಬ್ರಾಡ್ಮನ್ ಅವರ ಮೆಚ್ಚಿನ ಬ್ಯಾಟ್ಸ್‌ಮನ್ ಆಗಿದ್ದರು. ಶಿಸ್ತು, ವೃತ್ತಿಪರತೆಯ ಆಟವೆಂದರೆ ಹಾಗೆ ಇರಬೇಕು ಎಂದು ಯಾವತ್ತೂ ಬೇಡಿ ಉದಾಹರಿಸುತ್ತಿದ್ದರು. ಸ್ಪಿನ್ ಮಾಂತ್ರಿಕ ಎಂದೇ ಹೆಸರಾದ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಆಫ್‌ಸ್ಪಿನ್ ಬೌಲಿಂಗ್ ಅನ್ನು ಅವರು ಒಪ್ಪಲಿಲ್ಲ. 'ಅವರ ಆ್ಯಕ್ಷನ್ ಸರಿಯಾಗಿಲ್ಲ. ಅದನ್ನು ಬೌಲಿಂಗ್ ಎಂದು ಒಪ್ಪಲಾಗದು' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿಬಿಟ್ಟಿದ್ದರು.

ಬೇರೆ ಕ್ರೀಡೆಗಳಲ್ಲಿ ಯಾರಾದರೂ ಸಾಧಕರಾಗಿ ಹೊರಹೊಮ್ಮಿದರೆ ಅವರನ್ನು ಅಭಿನಂದಿಸುವ ವಿಶಾಲ ಹೃದಯ ಅವರದ್ದಾಗಿತ್ತು. ಸಾನಿಯಾ ಮಿರ್ಜಾ, ಸೈನಾ ನೆಹ್ವಾಲ್, ಪಿ.ವಿ. ಸಿಂಧು ತರಹದವರ ಮೊಬೈಲ್ ನಂಬರ್‌ಗಳನ್ನು ಕಷ್ಟಪಟ್ಟು ಪತ್ತೆ ಮಾಡಿ ಅವರೆಲ್ಲರನ್ನು ಬೇಡಿ ಅಭಿನಂದಿಸಿದ್ದನ್ನೇ ಒಂದು ದೊಡ್ಡ ಕತೆಯಾಗಿ ಬಣ್ಣಿಸುವವರು ಸಿಗುತ್ತಾರೆ.

ಬೇಡಿ ಅವರು ತೀರಿಹೋದಾಗ ಅವರಿಗೆ 83 ವರ್ಷ ವಯಸ್ಸು. ಅದಕ್ಕೂ ಮುಂಚಿನ ಕೆಲವು ವರ್ಷಗಳಲ್ಲಿ ಅವರು ಅಧ್ಯಾತ್ಮದ ಬಗೆಗೆ ಹೆಚ್ಚು ಮಾತನಾಡುತ್ತಿದ್ದರು. ಕಬೀರರ ದೋಹಾಗಳನ್ನು ಹೇಳುತ್ತಾ, ಅವುಗಳ ಅರ್ಥ–ತತ್ತ್ವದ ಕುರಿತು ದೀರ್ಘಾವಧಿ ಬಣ್ಣಿಸುತ್ತಿದ್ದರು. ಜಗತ್ತಿನ ಎಲ್ಲ ವಿಷಯಗಳಲ್ಲಿಯೂ ಅವರಿಗೆ ಆಸಕ್ತಿ ಇತ್ತು. ವಿರಾಟ್ ಕೊಹ್ಲಿ ಪ್ರವರ್ಧಮಾನಕ್ಕೆ ಬಂದಾಗ, ಒಂದೊಮ್ಮೆ ಬೇಡಿ ಅವರ ಕಾಲಿಗೆ ಬಿದ್ದಿದ್ದರು. ಆಗ ಮನದುಂಬಿ ಅವರನ್ನು ಹರಸಿದ ಚಿತ್ರ ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು.

ಬೇಡಿ ಕೆಲವರಿಗೆ ದ್ರೋಣಾಚಾರ್ಯರೂ ಆಗಿದ್ದರು. ಪಾಕಿಸ್ತಾನದಲ್ಲಿಯೂ ಅವರು ಫೇಮಸ್ಸು. 'ಬೇಡಿ ಅವರು ಚೆಂಡನ್ನು ಹೇಗೆ ಹಿಡಿದುಕೊಳ್ಳುತ್ತಾರೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿ ನಾನು ಬೌಲಿಂಗ್‌ನ ಹಲವು ಸೂಕ್ಷ್ಮಗಳನ್ನು ಕಲಿತವನು' ಎಂದು ಅಲ್ಲಿನ ಬೌಲರ್ ಇಕ್ಬಾಲ್ ಕಾಸಿಂ ಹೇಳಿಕೊಂಡಿದ್ದರು. ದೆಹಲಿ ಹಾಗೂ ಉತ್ತರ ವಲಯದಲ್ಲಿ ಕ್ರಿಕೆಟ್ ಬೀಜಗಳನ್ನು ಬಿತ್ತಿ, ಒಳ್ಳೆಯ ಫಲ ತೆಗೆದವರಲ್ಲಿ ಬೇಡಿ ಮುಖ್ಯರು. 1978–79ರಲ್ಲಿ ರಣಜಿ ಕಪ್ ಎತ್ತಿಹಿಡಿದಾಗ ಅವರ ಹೈವೋಲ್ಟೇಜ್ ನಗುವನ್ನು ಕಂಡವರಲ್ಲಿ ಮೋಹಿಂದರ್ ಅಮರ್‌ನಾಥ್, ಕಪಿಲ್‌ದೇವ್, ಕೀರ್ತಿ ಆಜಾದ್, ಮದನ್‌ಲಾಲ್ ಎಲ್ಲರೂ ಇದ್ದರು. ಮಣಿಂದರ್ ಸಿಂಗ್, ಕಾರ್ತಿಕ್ ಮುರಳಿ ತರಹದ ಬೌಲರ್‌ಗಳಿಗೆ ಕೌಶಲ ಕಲಿಸಿದ ನೆನಪುಗಳೂ ಜತನವಾಗಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65